**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ 6/2020**

**ದಿನಾಂಕಃ 07.11.2022**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 3 (ಚಾ.ಸಾ.3)**

| | | |
|---|---|---|
| ಹೆಸರು | ಃ | ಲಕ್ಷ್ಮಣ |
| ತಂದೆಯ ಹೆಸರು | ಃ | ಸೇವ್ಯಾನಾಯಕ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಕೋಳಿ ಅಂಗಡಿಯಲ್ಲಿ ಕೆಲಸ |
| ವಾಸ ಸ್ಥಳ | ಃ | ದೊಡ್ಡೇರಿ ಕಾಲೋನಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.1 - ಪ್ರಕಾಶ ಮತ್ತು ಚಾಸಾ.2 - ಕುಮಾರ ನನ್ನ ಸಹೋದರರು. ಆರೋಪಿ ನನ್ನ ಚಿಕ್ಕಪ್ಪ ರಾಮನಾಯಕರವರ ಮಗ.

2. ಸರ್ವೆ ನಂ.59 ರಲ್ಲಿ 2 ಎಕೆರೆ ನನ್ನ ತಾತ - ಮೋಟಾ ಸೋಮನಾಯಕರವರಿಗೆ ಮಂಜೂರಾಗಿತ್ತು. ಅವರು ತೀರಿಕೊಂಡಿದ್ದಾರೆ. ಅವರ ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ – ರಾಮನಾಯಕ ಸಾಗುವಳಿ ಮಾಡುತ್ತಿದ್ದರು. ನನ್ನ ತಂದೆ ಮತ್ತು ರಾಮನಾಯಕ ತೀರಿಕೊಂಡಿದ್ದಾರೆ. ಅವರ ನಂತರ ನಾವು ಮತ್ತು ರಾಮನಾಯಕರವರ ಮಕ್ಕಳು ಸಾಗುವಳಿ ಮಾಡುತ್ತಿಲ್ಲ. ಜಮೀನು ಪಾಳು ಬಿದ್ದಿದೆ.

3. ತಾಃ 04.08.2019 ರಂದು ಬೆಳಿಗ್ಗೆ 7 ಗಂಟೆಗೆ ನಾನು, ನನ್ನ ಸಹೋದರಾದ ಪ್ರಕಾಶ ಮತ್ತು ಕುಮಾರ ಜಮೀನಿನಲ್ಲಿ ಕಳೆ ಕೀಳಲು ಹೋಗಿದ್ದೆವು. ಬೆಳಿಗ್ಗೆ 9 – 9.30 ಗಂಟೆಯಲ್ಲಿ ಆರೋಪಿ ಕಾರಿನಲ್ಲಿ ಬಂದನು. ಬಂದೂಕು ಹಿಡಿದುಕೊಂಡು ಆರೋಪಿ ಬಂದನು. ಆಗ ನಾವು ಓಡಿ ಹೋಗುತ್ತಿರುವಾಗ ಆರೋಪಿ ಶೂಟ್ ಮಾಡಿದ, ಅದು ನನ್ನ ಅಣ್ಣ – ಕುಮಾರನ ಬಲ ತೊಡೆಗೆ ಬಂದು ತಾಗಿ ಪಾರಾಗಿ ಎಡತೊಡೆಗೆ ಸವರಿಕೊಂಡು ಹೋಯಿತು.

**4.** ನನ್ನ ಅಣ್ಣ - ಕುಮಾರನಿಗೆ ರಕ್ತಗಾಯವಾಗಿ ಕೆಳಗೆ ಬಿದ್ದನು. ರಕ್ತಸ್ರಾವವಾಗುತ್ತಿತ್ತು. ಆರೋಪಿ ಮತ್ತೆ ಪುನಃ ಬಂದೂಕು ಲೋಡ್ ಮಾಡಲು ಮತ್ತೊಂದು ಗುಂಡು ಹಾರಿಸಲು ಹೋದ. ನಾನು ಮತ್ತು ಲಕ್ಷ್ಮಣ ಹಿಡಿಯಲು ಹೋದಾಗ ಆರೋಪಿ ಬಂದೂಕು ಬಿಸಾಡಿ ಓಡಿ ಹೋದನು.

**5.** ನಂತರ ನನ್ನ ಅಣ್ಣನ್ನು ಅಂಬುಲೈನ್ಸ ತರಿಸಿ ಆರ್ ಆರ್ ಆಸ್ಪತ್ರೆಗೆ ದಾಖಲು ಮಾಡಿದೆನು. ಬಂದೂಕು ಬಿಸಾಡಿದ್ದರಿಂದ ಬಂದೂಕು ಮುರಿದು ಹೋಗಿತ್ತು.

**6.** ನನ್ನ ನನ್ನ ಅಣ್ಣ – ಕುಮಾರ ಬನಿಯನ್, ಟೀ ಶರ್ಟ್, ಲುಂಗಿ, ಅಂಡರ್‌ವೇರ್ ಧರಿಸಿದ್ದನು. ಟೀ ಶರ್ಟ್ ಮತ್ತು ಅಂಡರ್‌ವೇರ್‌ಗೆ ರಕ್ತವಾಗಿತ್ತು. ಅಂಡರ್‌ವೇರ್ ಜೇಬಿನಲ್ಲಿದ್ದ ಮೊಬೈಲ್ ಒಡೆದುಹೋಗಿತ್ತು. ಸದರಿ ಬಟ್ಟೆಗಳು, ಬಂದೂಕು ಮತ್ತು ಮೊಬೈಲ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಟೀ ಶರ್ಟ್, ಅಂಡರ್‌ವೇರ್, ಬಂದೂಕು ಮತ್ತು ಮೊಬೈಲ್‌ಗಳನ್ನು ಈಗಾಗಲೇ ಎಂ.ಓ.1 ರಿಂದ ಎಂ.ಓ.4 ಎಂದು ಗುರುತಿಸಲಾಗಿದೆ.

**7.** ಪೊಲೀಸರ ಮುಂದೆ ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಈಗ 2 ಫೋಟೋ ನೋಡಿದ್ದು, ಅದರಲ್ಲಿ ಆರೋಪಿ ತಂದಿದ್ದ ಕಾರು ಇರುತ್ತದೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

**8.** ಆರೋಪಿ ಇನ್ನೊಂದು ಗುಂಡು ತೆಗೆದುಕೊಂಡು ಬಂದೂಕಿಗೆ ಲೋಡ್ ಮಾಡಲು ಹೋದಾಗ ನಾನು ಮತ್ತು ಪ್ರಕಾಶ ಚಂದ್ರಯ್ಯನಿಗೆ ಬೇಡ ಬೇಡ ಎಂದು ಬಂದೂಕು ಕಿತ್ತುಕೊಳ್ಳಲು ಹೋದಾಗ ಆರೋಪಿ - ಚಂದ್ರಯ್ಯ

ಬಂದೂಕು ಬಿಸಾಡಿ ನಿಮ್ಮನ್ನೆಲ್ಲಾ ಸಾಯಿಸದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಕಾರು ಬಿಟ್ಟು ಓಡಿ ಹೋದನು ಎಂದು ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿ.

**ಪಾಟೀ ಸವಾಲುಃ**

**(ಆರೋಪಿ ಪರ ವಕೀಲರು ಕೆಲವೊಂದು ದಾಖಲೆಗಳನ್ನು ಸಂಬಂಧಪಟ್ಟ ಪೊಲೀಸರು ಚಾರ್ಜ್ ಶೀಟ್‌ನೊಂದಿಗೆ ಕೊಟ್ಟಿಲ್ಲವೆಂದು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ. ಪಾಟೀ ಸವಾಲನ್ನು ಖರ್ಚು ಕೊಡುವ ನಿಬಂಧನೆಗೆ ಒಳಪಟ್ಟು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ., ವಕೀಲರಿಂದಃ</u>**

**4.**

**5.**

**<u>ಮರುವಿಚಾರಣೆಃ ಇಲ್ಲ.</u>**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**